# ಅಧ್ಯಾಯ - 5

# ಪ್ರಾರ್ಥನೆ

# ಇಬ್ಬರ ನಡುವಣ ನಡೆಯುವ ಮಾತುಕತೆ

## ನಾವು ಯಾತಕ್ಕೆ ಪ್ರಾರ್ಥಿಸಬೇಕು?

ಪ್ರಾರ್ಥನೆ ಎನ್ನುವುದು. ದೇವರ ಸ್ವರವನ್ನು ಆಲಿಸಿ ಆತನೊಡನೆ ಮಾತನಾಡುವುದು. ಇದಕ್ಕಾಗಿ ಸ್ವಲ್ಪ ಸಮಯವನ್ನು ನಾವು ಕೊಡಬೇಕು. ಇದು ನಮಗೆ ದೇವರೊಂದಗೆ ಸಂಬಂದ ಹೊಂದಲು ಸಹಾಯವಾಗುತ್ತದೆ. ದೇವರು ನಮ್ಮೊಂದಿಗೆ ಮಾತನಾಡಲು ಇಷ್ಟಪಡುತ್ತಾನೆ. ದೇವರು ನಮ್ಮನ್ನು ಪ್ರೀತಿಸಿ, ಜಾಗ್ರತೆ ಯಾಗಿ ನಮ್ಮನ್ನು ನೋಡುತ್ತಾ ನಾವು ಆತನಲ್ಲಿ ಚೆನ್ನಾಗಿ ಬೆಳೆಯುವಂತೆ ಮಾಡುತ್ತಾನೆ. (ಇಬ್ರಿಯ ೧೩ : ೫)

## ಯೇಸುಕ್ರಿಸ್ತನಿಗೆ ಸಮಾನರು ಯಾರೂ ಇಲ್ಲ ?

ದೇವರ ಕುಮಾರನಾದ ಯೇಸುಕ್ರಿಸ್ತನು ನಮ್ಮಂತೆ ಮನುಷ್ಯ ಕುಮಾರನಾಗಿದ್ದು ಈ ಲೋಕದಲ್ಲಿ ಎಲ್ಲಾ ವಿಧವಾದ ಸಮಸ್ಯಗಳನ್ನು ಎದುರುಗೊಂಡನು. ಆದುದರಿಂದ ನಮ್ಮ ಬಲಹೀನತೆಗಳನ್ನು ಆತನು ತಿಳಿದಿದ್ದಾನೆ. ನಮಗೆ ಏನು ಬೇಕೋ( ಆತನಿಗೆ ತಿಳಿದದೆ. ಇಬ್ರಿಯ ೪ : ೧೫) ಈಗ ಯೇಸುಕ್ರಿಸ್ತನು ದೇವರ ಬಲಗಡೆಯಲ್ಲಿ ಕುಳಿತು ನಮಗಾಗಿ ವಿಜ್ಞಾಪಣೆಯನ್ನು ಮಾಡುತ್ತಿದ್ದಾನೆ. ನಾವು ಆತನಿಗೆ ಇಷ್ಟವಾದ ರೀತಿಯಲ್ಲಿ ಜೀವಿಸ ಬೇಕೆಂದು ಆತನೊಡನೆ ಸ್ನೇಹದಿಂದ ಇರಬೇಕೆಂಬುದೆ ಆತನ ಇಷ್ಟ. ( ರೋಮ ೮ : ೩೪) ನಾವು ಎಲ್ಲಿಗೆ ಹೋದರೂ ಪವಿತ್ರ ಆತ್ಮ ನಮ್ಮಾಂದಿಗೇ ಇರುತ್ತಾನೆ. ಎಲ್ಲಾ ಸಮಯದಲ್ಲಿ ನಮಗೆ ಸರಿಯಾದ ಮಾರ್ಗದರ್ಶನವನ್ನು ಮಾಡುವವ ನಾಗಿದ್ದಾನೆ. ಈಗ ನಾವು ಯೇಸುವಿನಲ್ಲಿ

ದೇವರ ಮಕ್ಕಳಾಗಿ ಜೀವಿಸುತ್ತಿದ್ದೇವೆ. ಅದೇ ರೀತಿಯಲ್ಲಿ ಯೇಸು ಬಂದು ನಮ್ಮನ್ನು ಈ ಲೋಕದಿಂದ ಬಿಡುಗಡೆ ಮಾಡುವವರೆಗೂ ಹಾಗೇ ಕ್ರಿಸ್ತನಲ್ಲಿ ಜೀವಿಸ ಬೇಕು (ರೋಮ ೮ : ೧೭)

## ನಾವು ಹೇಗೆ ಪ್ರಾರ್ಥನೆ ಮಾಡಬೇಕು ?

ನಾವು ಹೊಸ ಜೀವನದ ಕ್ರೈಸ್ತವರಾಗಿ ಇದ್ದುಕೊಂಡು ನಮ್ಮಲ್ಲಿ ಕಡಿಮೆ ಜ್ಞಾನವು ಇದೆಯೆಂದು ದೇವರಿಗೆ ತಿಳಿದದೆ. ಆದುದರಿಂದ ದೇವರು ನಮಗೆ ಸಹಾಯ ಮಾಡುತ್ತಾನೆ. ದೇವರೊಡನೆ ಆತ್ಮೀಯವಾಗಿ ಬೆಳೆಯಲು ದೇವರೊಂದಿಗೆ ನಾವು ಪ್ರಾರ್ಥನೆ ಮಾಡುವುದು. ತುಂಬಾ ಮುಖ್ಯವಾದದ್ದು. (ಎಫೆಸ ೬ : ೧೮) ಹೀಗೆ ದೇವರು ನಮ್ಮೊಂದಿಗೆ ತನ್ನ ಆತ್ಮದ ಮೂಲಕವಾಗಿ ಮಾತನಾಡುವನು. ನಾವು ಹೇಗೆ ಪ್ರಾರ್ಥನೆ ಮಾಡಬೇಕೋ ದೇವರ ಆತ್ಮವು ನಮಗೆ ಸಹಾಯ ಮಾಡುತ್ತಾನೆ (ಯೋಹಾನ ೧೪ : ೧೬, ೨೬) ಮತ್ತು ನಾವು ದೇವರಿಂದ ಬೋಧಿ ಸಲ್ಪಟ್ಟು ನಮ್ಮ ಪ್ರಾರ್ಥನೆಗೆ ಸರಿಯಾದ ಉತ್ತರವನ್ನು ದೇವರಿಂದ ಹೊಂದುತ್ತೇವೆ. (ರೋಮಾ ೮ : ೨೬, ೨೭) ''ಯಾವ ಸಂಭಂಧವಾಗಿಯೂ ಚಿಂತೆಮಾಡದೆ ಸರ್ವ ವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನು ಪ್ರಾರ್ಥನೆ ವಿಜ್ಞಾಪಣೆಗಳನ್ನು ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ'' (ಫಿಲಿಪ್ಪಿ ೪ : ೬)

> ''ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ ಅದರಲ್ಲಿ ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿಯನ್ನು ಮಾಡಿರಿ'' (ಕೊಲಸ್ಸೆ ೪ : ೨)

ಹೀಗೆ ನಾವು ದೇವರಲ್ಲಿ ಪ್ರಾರ್ಥನೆ ಮಾಡುವವರಾಗಿರಬೇಕು.

## ಸರಿಯಾದ ಗುರಿ

ನಾವು ದೇವರಿಗೆ ಪ್ರಾರ್ಥನೆ ಮಾಡುವಾಗ ದೇವರಿಗೆ ಇಷ್ಟರಾಗಿ ಜೀವಿಸಬೇಕು. ನಮ್ಮ ಇಷ್ಟದ ಪ್ರಕಾರವಾಗಿ ನಾವು ಪ್ರಾರ್ಥನೆ ಮಾಡುವುದು. ದೇವರ ಚಿತ್ತವಲ್ಲ.

''ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ

ಉಪಯೋಗಿಸ ಬೇಕೆಂಬ ದುರಾಭಿಪ್ರಾಯಪಟ್ಟು ಬೇಡಿಕೊಳ್ಳು ವುದರಿಂದ ನಿಮಗೆ ದೊರೆಯುವುದಿಲ್ಲ''

(ಯಾಕೋಬು ೪ : ೩)

ನಾವು ಪ್ರಾರ್ಥನೆ ಮಾಡುವಾಗ ಸರಿಯಾದ ಉದ್ದೇಶವನ್ನು ಅರಿತು ಪ್ರಾರ್ಥನೆ ಮಾಡಬೇಕೆಂದು ದೇವರ ಬಯಸ್ಸುತ್ತಾನೆ. ದೇವರ ಚಿತ್ತಕ್ಕೆ ಸರಿಯಾಗಿ ನಾವು ಪ್ರಾರ್ಥನೆ ಮಾಡಿದಾಗಲೇ ದೇವರು ನಮ್ಮ ಪ್ರಾರ್ಥನೆಯನ್ನು ಕೇಳುವನು. ನಾವು ಪ್ರಾರ್ಥನೆ ಮಾಡುವಾಗ ವಿಶೇಷವಾದ, ಮತಗಳಿಗೆ ಸಂಭಂಧಿಸಿದ ಪ್ರಾರ್ಥನೆ ಮಾಡುವುದು ಬೇಡ. ಅಥವಾ ಹೇಳಿದ್ದನೇ ಹೇಲುವ, ಸಿದ್ದವಾಗಿ ಇರುವ ಪ್ರಾರ್ಥನೆಯನ್ನು ಮಾಡುವುದು ಬೇಡ. ನಿನ್ನ ಪ್ರಾರ್ಥನೆಯು ದೇವರ ರಾಜ್ಯದ, ನೀತಿಯ ವಿಸ್ತರಣೆಗಾಗಿಯೇ ಮಾಡುವ ಪ್ರಾರ್ಥನೆಯಾಗಿರಬೇಕು. (ಯೋಹಾನ ೧೬ : ೨೪)

## ಪವಿತ್ರವಾದ ಹೃದಯದಿಂದ ಪ್ರಾರ್ಥಿಸು

ನಾವು ಪ್ರಾರ್ಥನೆ ಮಾಡುವಾಗ ದೇವರ ಸನ್ನಿಧಿಯಲ್ಲಿ ಬಹು ಪವಿತ್ರರಾಗಿ ಇರಬೇಕು. ನಂಬಿಕೆಯಿಂದ ದೇವರೊಡನೆ ಮುಖಾ ಮುಖಿಯಾಗಿ ಪ್ರಾರ್ಥಿಸುವುದು. ಬಹು ಮುಖ್ಯವಾದದ್ದು. (ಇಬ್ರಿಯ ೪ : ೧೬) ಒಂದು ವೇಳೆ ನೀನು ಪಾಪವನ್ನು ಮಾಡಿದರೆ ನಿನ್ನ ಪಾಪಗಳನ್ನು ಒಪ್ಪಿಕೊಂಡು ಯೇಸುಕ್ರಿಸ್ತನು ನಿನ್ನನ್ನು ಕ್ಷಮಿಸುವಂತೆ ಪ್ರಾರ್ಥಿಸಬೇಕು.

''ಅದೇನಂದರೆ, ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರ ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆ ಯಾಗುವುದು'' (ರೋಮ ೧೦ : ೯, ೧೦) ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ದಿ ಮಾಡುತ್ತದೆ'' (೧ ಯೋಹಾನ ೧ : ೭) ''ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ. ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನ್ನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು. ಹೀಗೆ ನಾವು

ಪ್ರಾರ್ಥಿಸುವುದರ ಮೂಲಕ ದೇವರಿಗೆ ಸಮೀಪವಾಗಿ ಬರಬಹುದು. ದೇವರು ನಮ್ಮಲ್ಲಿ ಧೈರ್ಯದ ಆತ್ಮನನ್ನು ಇರಿಸಿದ ಮೂಲಕ ನಾವು ದೇವರೊಂದಿಗೆ ಸಮಾಧಾನವಾಗಿ ಇರುವವರಾಗಿದ್ದೇವೆ. (೧ ಯೋಹಾನ ೩ : ೨೧ - ೨೪)

## ನಾವು ಇತರರೊಡನೆ ಪ್ರಾರ್ಥಿಸಬಹುದೋ ?

ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ (ಮತ್ತಾಯ ೧೮ ಎ ೨೦) ನಾವು ಒಬ್ಬರೇ ಇರುವಾಗ ಪ್ರಾರ್ಥಿಸುವುದು. ನಮಗೆ ಹೆಚ್ಚು ಬಲವನ್ನು ಕೊಡುತ್ತದೆ. ಅದೇ ರೀತಿಯಾಗಿ ಇತರರಿಗಾಗಿ ಸಂಘದಲ್ಲಿ ಒಟ್ಟಾಗಿ ಸೇರಿ ಪ್ರಾರ್ಥಿಸುವುದು ಸಂಘವನ್ನು ಬಲಪಡಿಸುತ್ತದೆ. (ಅ. ಕೃ. ೪ : ೨೩, ೨೪, ೧೨ : ೧೨) ಸಮೀಪದಲ್ಲಿ ಇರುವ ಆತ್ಮೀಯ ಶಕ್ತಿಯನ್ನು ಹೊಂದಿ ದೇವರ ವಾಕ್ಯದ ಪ್ರಕಾರ ಇರುವ ಸಂಘಕ್ಕೆ ಹೋಗಿ ಸಮೂಹ ಪ್ರಾರ್ಥನೆಯಲ್ಲಿ ಬಾಗವಹಿಸುವುದು ಒಟ್ಟಾಗಿ ಸೇರಿ ಪ್ರಾರ್ಥಿಸುವುದು ಬಹಳ ಬಳ್ಳೆಯದು.

# ಪ್ರಾರ್ಥನೆ ಸಲಹೆಗಳು :

- ಬೈಬಿಲ್ (ದೇವರ ವಾಕ್ಯ)ವನ್ನು ಓದುವುದರ ಜೊತೆಗೆ ಪ್ರತಿದಿನವೂ ಪ್ರಾರ್ಥನೆ ಮಾಡಬೇಕು.
- ಪ್ರತಿದಿನವೂ ಕಡೇ ಪಕ್ಷ ೧೦ ನಿಮಿಷವಾದರೂ ಪ್ರಾರ್ಥಿಸು. ನೀನು ದೇವರೊಂದಿಗೆ ಆತ್ಮೀಯ ಸಂಭಂಧವನ್ನು ಬೆಳೆಸಿಕೋಂಡು ಹೋದಂತೆ ನಿನಗೆ ಪ್ರಾರ್ಥನೆ ಮಾಡಲು ೧೦ ನಿಮಿಷ ಸಾಕಾಗುವುದಿಲ್ಲ. ನೀನು ಹೆಚ್ಚು ಸಮಯ ಕಳೆದದ್ದೇ ನಿನಗೆ ಗೂತ್ತಾಗುವುದಿಲ್ಲ.
- ನೀನು ಪ್ರಾರ್ಥನೆ ಮಾಡುವಾಗ ಅಭ್ಯಂತರವಿಲ್ಲದ ಶಾಂತಿಯಿಂದ ಕೂಡಿದ ಸ್ಥಳವನ್ನು ಅಂದರೆ ಏಕಾಂತ ಸ್ಥಳವನ್ನು ಆರಿಸಿಕೊಳ್ಳಬೇಕು.
- ನಾವು ಪ್ರಾರ್ಥನೆ ಮಾಡುವಾಗ ಯೇಸುಕ್ರಿಸ್ತನ ಹೆಸರಿನಲ್ಲಿ ಪ್ರಾರಂಭಿಸಿ ತಂದೆಯಾದ ದೇವರಿಗೆ ನಂಬಿಕೆಯಿಂದ ಪ್ರಾರ್ಥಿಸು. ಆಗ ದೇವರಲ್ಲಿ

ನಾವು ಬೆಳೆಯುತ್ತೇವೆ. (ಯೋಹಾನು ೧೪ : ೧೩, ೧೬ : ೨೩)

- ನಾವು ಪ್ರಾರ್ಥನೆಮಾಡುವಾಗ ದೇವರು ಯಾರೆಂದು ನಮಗೆ ತಿಳಿದದೆ ಆದುದರಿಂದ ದೇವರು ನಮಗೆ ಮಾಡಿದ ಉಪಕಾರಗಳನ್ನು ಅರಿತು ಆತನನ್ನು ಸ್ತುತಿಸುತ್ತಾ ಪ್ರಾರ್ಥಿಸಬೇಕು.

## ಪ್ರಶ್ನೆಗಳು ಮತ್ತು ವಿಷಯಗಳು :

೧. ಮಾರ್ಕ ೧೧ : ೨೨-೨೫ ವಚನಗಳನ್ನು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಎ) ಈ ವಾಕ್ಯ ಯಾರಿಗೆ ವರ್ತಿಸುತ್ತದೆ.

ಬಿ) ಪ್ರಾರ್ಥನೆಯಿಂದ ನಾವು ಏನು ಮಾಡುತ್ತೇವೆ ?

ಸಿ) ನಾವು ಪ್ರಾರ್ಥಿಸಿದಾಗ ನಮ್ಮ ಹೃದಯವು ಹೇಗೆ ಇರುತ್ತದೆ?

ಡಿ) ಪ್ರಾರ್ಥಿಸುವುದಕ್ಕೆ ಮೊದಲು ನಾವು ಏನು ಮಾಡಬೇಕು ?

೨. ನಿನಗೆ ಪ್ರಾರ್ಥನೆಯಲ್ಲಿ ನಂಬಿಕೆ ಇದ್ದರೆ ಏನು ಕೊಡಲ್ಪಡುತ್ತದೆ? (ಮತ್ತಾಯ ೧೧ : ೨೧, ೨೨)

೩. ನಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ಹೇಗೆ ನಂಬುತ್ತೀ ? (೧ ಯೋಹಾನ ೫ : ೧೪, ೧೫)

೪. ನಮ್ಮ ಪ್ರಾರ್ಥನೆಗೆ ದೇವರು ಹೇಗೆ ಉತ್ತರಕೊಡುತ್ತಾನೆ (ಎಫೆಸಿ ೩ : ೨೦)

೫. ದೇವರಿಂದ ನಮಗೆ ಯಾಕೆ ಉತ್ತರ ಬರುವುದಿಲ್ಲ ? (ಯಾರೊಂಬ ೪ : ೨)

೬. ದೇವರ ಚಿತ್ತದ ಪ್ರಕಾರ ಪ್ರಾರ್ಥಿಸುವುದು ಹೇಗೆ ? (ಇಬ್ರಿ ೧೦ : ೩೫, ೩೬)

೭. ಯಾವ ವಿಷಿಯಗಳಿಗಾಗಿ ನಾವು ದೇವರೊಂದಿಗೆ ಪ್ರಾರ್ಥಿಸಬೇಕು ?(ಮತ್ತಾಯರ್ ೯ : ೩೮) ( ೧ ತಿಮೋತಿ ೨ : ೧, ೨) ಯಾಕೋಬು ೧ : ೫)

೮. ಮತ್ತಾಯ ೬ : ೧-೧೫ ರ ವಚನಗಳ ಪ್ರಾಕಾರ ಯೇಸುಕ್ರಿಸ್ತನು ನಾವು ಹೇಗೆ ಪ್ರಾರ್ಥನೆ ಮಾಡಬೇಕೆಂದು ಹೇಳುತ್ತಾನೆ?

ಎ) ಎಲ್ಲಿ ಪ್ರಾರ್ಥಿಸಬೇಕು (೬ ನೆ ವಚನ)

ಬಿ) ದೊಡ್ಡ ಪ್ರಾರ್ಥನೆ ಅವಸರವೆ ? (೭, ೮ ವಚನೆಗಳು)

ಸಿ) ದೇವರಿಗೆ ನಮ್ಮ ಪ್ರಾರ್ಥನೆ ತಿಳಿದದೆಯಾ ? (೮ ನೆ ವಚನ)

ಡಿ) ನಾವು ಯಾರಿಗೆ ಪ್ರಾರ್ಥಿಸಬೇಕು? (೯ ನೇ ವಚನ)

ಇ) ನಾವು ಯಾರಿಗೆ ಮಹಿಮೆ ಬರುವಂತೆ ಪ್ರಾರ್ಥಿಸಬೇಕು ? (೯ ನೇ ವಚನ)

ಎಫ್) ನಮ್ಮ ಅನುದಿನದ ಅವಸರಗಳಿಗಾಗಿ ಬೇಡಬೇಕೋ (೧೧ನೇ ವಚನ)

ಜಿ) ನಮ್ಮ ಪಾಪಗಳಿಗಾಗಿ ಪ್ರಾರ್ಥಿಸಬೇಕೊ ? (೧೨ ನೇ ವಚನ)

ಹೆಚ್) ಸೈತಾನನನ್ನು ಎದುರಿಸಲು ಪ್ರಾರ್ಥಿಸ ಬೇಕೊ ? (೧೩ ನೇ ವಚನ)

## ಪ್ರಾರ್ಥನೆ :

ರಕ್ಷಕನಾದ ಯೇಸುವೇ ನಿನ್ನಲ್ಲಿ ಒಂದೇ ಹೃದಯದಿಂದ ನಂಬಿಕೆಯಿಂದ ಪ್ರಾರ್ಥಿಸಿ ನಾನು ಆತ್ಮೀಯವಾಗಿ ಬೆಳೆಯಲು ಮತ್ತು ಫಲವನ್ನು ತರುವಂತೆ ನನ್ನನ್ನು ಬಲಪಡಿಸೆಂದು ಪ್ರಾರ್ಥಿಸಿ ಯೇಸುವಿನ ಹೆಸರಿನಲ್ಲಿ ನಂಬಿ ಸ್ತುತಿಸುತ್ತೇನೆ. ಆಮೆನ್.